**ಪಿಡಬ್ಲ್ಯೂ-1**

ಸಾಕ್ಷಿಗೆ ದಿನಾಂಕಃ 11-06-2024 ರಂದು ಕ್ರಮವಾಗಿ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಅರ್ಜಿದಾರರ ಪರ ಶ್ರೀ ಸಿಎಂಎನ್ ವಕೀಲರಿಂದಃ

ನನ್ನ ಮುಖ್ಯ ವಿಚಾರಣೆಯಾಗಿ ನಾನೇ ಶಪಥೀಕರಿಸಿರುವ ಪ್ರಮಾಣ ಪತ್ರ ಹಾಜರು ಪಡಿಸಿದ್ದೇನೆ. ಅದರಲ್ಲಿರುವ ಸಂಗತಿಗಳು ಸತ್ಯವಾಗಿದ್ದು ಸಹಿಗಳು ನನ್ನವುಗಳೇ ಆಗಿವೆ.

ಅರ್ಜಿಗೆ ಸಂಬಂಧಪಟ್ಟಂತೆ, ನನ್ನ ಸೋದರಮಾವ ಕೃಷ್ಣಪ್ಪ ನನ್ನ ತಾಯಿ ಪಾರ್ವತಮ್ಮಳಿಗೆ ಬರೆದುಕೊಟ್ಟ ವಿಲ್ ನಾಮೆಯನ್ನು ಹಾಜರು ಪಡಿಸಿದ್ದೇನೆ, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಕೃಷ್ಣಪ್ಪನ ಸಹಿಯನ್ನು ನೋಡಿ ಗುರುತಿಸಿದ್ದು ನಿಪಿ-1(ಎ) ಎಂದು ಗುರುತಿಸಲಾಯಿತು. ಸದರಿ ವಿಲ್ ನಾಮೆಗೆ ಮೂರುಜನ ಸಾಕ್ಷಿ ಹಾಕಿದ್ದು ಒಬ್ಬರು ಬಿಕ್ಲಂ ಹಾಕಿದ್ದಾರೆ. ಈಗ ಸಾಕ್ಷಿ-1 ಮತ್ತು 2 ಮತ್ತು ಬಿಕ್ಲಂದಾರ ಮೃತ ಪಟ್ಟಿದ್ದಾರೆ. 3 ನೇ ಸಾಕ್ಷಿದಾರ ಜೀವಂತ ಇದ್ದಾರೆ. ನನ್ನ ತಾಯಿಯ ಮರಣ ಪ್ರಮಾಣಪತ್ರ ನಿಪಿ2 ಎಂದು, ಕೃಷ್ಣಪ್ಪನ ಮರಣ ಪ್ರಮಾಣಪತ್ರವನ್ನು ನಿಪಿ3 ಎಂದು, ವಂಶವೃಕ್ಷವನ್ನು ನಿಪಿ-4 ಎಂದು, ಪಹಣಿಯನ್ನು ನಿಪಿ-5 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ .ಎದುರಾಳಿ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಲಾಯಿತು)

ಓ ಹೇ ಕೇ ಸ ಇ

(ಮಂಜುನಾಥ.ಜಿ.ಎ)

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಕೋಲಾರ.